ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:529/2017

ಚಾಸಾ:2 ಪ್ರಾಸಾ:3

ದಿನಾಂಕ: 11.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೃಷ್ಣಮೂರ್ತಿ ಭಟ್ |
| ತಂದೆಯ ಹೆಸರು | : | ಕೇಶವ ಭಟ್ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಬೀಜಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸ್ಥಳದಿಂದ 1 ಕಿ.ಮೀ ದೂರದಲ್ಲಿ ನನ್ನ ಅಂಗಡಿ ಇದೆ. ಸದ್ರಿ ದಿನ ಮಲ್ಲಿಗೆ ಹೂವನ್ನು ಬಸ್ಸಿನಿಂದ ಸ್ವೀಕರಿಸಲು ನಾನು ಅಪಘಾತದ ಸ್ಥಳಕ್ಕೆ ಬಂದಿದ್ದೆ.

ದಿ: 10-12-2016 ರಂದು ಬೀಜಾಡಿಯ ವೈ ಜಂಕ್ಷನ್ ಬಳಿ ಅಪಘಾತವಾಗಿದ್ದು, ನಡೆದುಕೊಂಡು ಹೋಗುತ್ತಿರುವವರಿಗೆ ಬೊಲೇರೋ ಗಾಡಿ ಡಿಕ್ಕಿಪಡಿಸಿದ ಪರಿಣಾಮ ಒಬ್ಬ ಪಾದಚಾರಿ ಗಾಯಗೊಂಡಿದ್ದು, ಅನಂತರ ಮೃತಪಟ್ಟಿರುತ್ತಾರೆ. ನಾನು ಸ್ಥಳಕ್ಕೆ ಬಂದಾಗ ಪೊಲೀಸರು ಬಂದಿದ್ದು ಆಗ ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದಿರುತ್ತಾರೆ. ಅನಂತರ ಆ ವ್ಯಕ್ತಿ ಕೆಎಂಸಿ ಆಸ್ಪತ್ರೆಯಲ್ಲಿ ಮೃತಪಟ್ಟಿರುವುದಾಗಿ ತಿಳಿದು ಬಂದಿರುತ್ತದೆ. ಬೊಲೇರೋ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಾಗಿ ತಿಳಿದು ಬಂದಿರುತ್ತದೆ. ಸದ್ರಿ ವಾಹನ ಇದೇ ಎಂದು ಸಾಕ್ಷಿ ನಿಪಿ-4 ಮತ್ತು 5ನ್ನು ನೋಡಿ ಗುರುತಿಸಿರುತ್ತಾರೆ. ಅದರ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ಮೃತ ಪಟ್ಟ ವ್ಯಕ್ತಿ ಗುರುರಾಜ ಬಾಯರಿ ಎಂದರೆ ಸರಿ. ಆತ ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮೇಲೆ ಹೇಳಿದಂತೆ ಅಪಘಾತವಾಗಿರುವುದನ್ನು ಪ್ರತ್ಯಕ್ಷವಾಗಿ ಕಂಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎ ಯು ಎಸ್ ರವರಿಂದಃ</u>**

ನಾನು ಹೂವಿನ ವ್ಯಾಪಾರವನ್ನು ಕೊಟೇಶ್ವರದಲ್ಲಿ ಮಾಡುತ್ತೇನೆ ಎಂದರೆ ಸರಿ. ಕೊಟೇಶ್ವರ ಮತ್ತು ಬೀಜಾಡಿಯ ನಡುವೆ 2 ಕಿ.ಮೀ ಅಂತರವಿರುತ್ತದೆ ಎಂದರೆ ಸರಿ. ಪ್ರತಿದಿನ ನಾನು ಹೂವನ್ನು ಕೊಟೇಶ್ವರ ಬೈ ಪಾಸಿನಲ್ಲಿ ಸ್ವೀಕರಿಸುತ್ತೇನೆ ಎಂದರೆ ಸರಿ. ಅಪಘಾತ ನಡೆದ ದಿನ ಸದ್ರಿ ಸ್ಥಳದಲ್ಲಿ ಹೂವನ್ನು ಪಡೆಯಲು ಹೋಗಿದ್ದೆ. ಬೀಜಾಡಿ ವೈ ಜಂಕ್ಷನ್ ನಲ್ಲಿ ಯಾವುದೇ ಬಸ್ಸು ನಿಲ್ದಾಣ ಇಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಅರ್ಧ ಗಂಟೆ ನಂತರ ನಾನು ಹೋಗಿರುತ್ತೇನೆ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಅಪಘಾತವಾದ ನಿಖರವಾದ ಸ್ಥಳ ಗುರುತಿಸಲು ಆಗುವುದಿಲ್ಲ. ನಾನು ಹೋಗುವ ವೇಳೆಗೆ ಸಾಕಷ್ಟು ಜನರು ಸೇರಿದ್ದರು.

ಜನರ ನಡುವೆ ಆರೋಪಿ ಇದ್ದ ಕಾರಣ ಆತನೇ ಚಾಲಕ ಎಂದು ಮಾತನಾಡುತ್ತಿದ್ದರಿಂದ ತಿಳಿದುಕೊಂಡಿರುತ್ತೇನೆ. ನಾನು ಹೋಗುವ ವೇಳೆಗೆ ಗಾಯಾಳು ಇರಲಿಲ್ಲ. ವಾಹನ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ರಲ್ಲಿ ಕಾಣುವ ವಾಹನ ಟೊಯೋಟಾ ಗಾಡಿಯಾಗಿದ್ದು ನಾನು ಹೇಳುವ ಗಾಡಿ ಬೊಲೇರೋ ಆಗಿರುತ್ತದೆ ಎಂದರೆ ಸರಿ. ಸದ್ರಿ ವಾಹನದ ಸಂಖ್ಯೆ ನನಗೆ ತಿಳಿದಿಲ್ಲ.

ಚಾಸಾ-1 ನಮ್ಮ ಮನೆಯ ಹತ್ತಿರದ ನಿವಾಸಿ. ಮೃತರು ನಮ್ಮ ಮನೆಯ ಹತ್ತಿರದ ನಿವಾ,ಯಾದ ಕಾರಣ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಯಾವ ಬಟ್ಟೆ ಧರಿಸಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಚಾಸಾ-1ರವರು ಹೇಳಿದ ಮೇರೆಗೆ ಆರೋಪಿಯನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ 20 ರಿಂದ 30 ಜನರು ಇದ್ದರು. ವಾಹನ ಚಾಲಕ ಯಾರು ಎಂದು ನಾನು ಅಂದಾಜಿಸಿರುತ್ತೇನೆ.

ಸದ್ರಿ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಅಪಘಾತವಾದ ಅರ್ಧ ಗಂಟೆಯಲ್ಲಿ ಸದ್ರಿ ಸ್ಥಳದಲ್ಲಿ ಇಲ್ಲದೆ ಇದೇ ಮೊದಲ ಬಾರಿಗೆ ಆತನನ್ನು ನೋಡುತ್ತಿರುವುದು ಎಂದರೆ ಸರಿ. ಅಪಘಾತದ ಸ್ಥಳ ಯಾವುದು ಎಂದು ನಾನು ನೋಡಿರುವುದಿಲ್ಲ. ಪಶ್ಚಿಮ ಬದಿಯಿಂದ ಪೂರ್ವ ಬದಿಗೆ ರಸ್ತೆ ದಾಟುತ್ತಿದ್ದ ವ್ಯಕ್ತಿಯ ತಪ್ಪಿನಿಂದ ಆತನಿಗೆ ಗಾಯಗಳು ಆಗಿರುತ್ತದೆ ಎಂದರೆ ಸರಿ. ಮೃತರ ಕುಟುಂಬಸ್ಥರ ಬಗ್ಗೆ ನನಗೆ ಮಾಹಿತಿ ಇಲ್ಲ. ಆತ ಚಾಸಾ1 ರವರ ದೂರದ ಸಂಬಂಧಿ ಎಂದರೆ ಸರಿ. ಆದ್ದರಿಂದ ಅವರಿಗೆ ದುಡ್ಡು ಸಿಗಲಿ ಎಂಬ ಕಾರಣದಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಬೊಲೇರೋ ವಾಹನದ ಚಾಲಕನಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಅಪಘಾತ ಪಡಿಸಿರುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**